ಚಿತ್ರಕಥಾಪಟ

# ಬುಡ್ರಮಜ್ಜಿ ಗುಂಡ

೪

ರಚನೆ: ಗಂಗಾಧರ ಕೆ.ಜಿ, ಧ್ವನಿ ಬಳಗ
ಚಿತ್ರಗಳು: ಮಲ್ಲಪ್ಪ ಅ ನಾಟಿಕಾರ, ವಿಜಯಪುರ





ಶಿಕ್ಷಕರಲ್ಲಿ ನಿವೇದನೆ:
ಈ ವಿಶಿಷ್ಟ ಚಿತ್ರಕಥಾಪಟವನ್ನು ಮಕ್ಕಳಿಗೆ ತೋರಿಸುತ್ತಾ ಕಥೆಯನ್ನು ಒಮ್ಮೆ ಓದಿ ಹೇಳಿ. ಹೇಳುತ್ತಲೇ ಕಥೆ ಆಧರಿಸಿ ಸಂವಾದ ನಡೆಸಿರಿ. ನಂತರ ಮಕ್ಕಳೇ ಸ್ವತಃ ಓದಲು ಪ್ರೋತ್ಸಾಹಿಸಿ.

ಧ್ವನಿ ಶೈಕ್ಷಣಿಕ ಸಂಪನ್ಮೂಲ ಕೇಂದ್ರ
Dhwani Educational Resource Centre

ಜನವರಿ–ಫೆಬ್ರವರಿ–ಮಾರ್ಚ್ ೨೦೨೫

ಆರಂಭ ಯೋಜನೆ
Arambha 2024-25 Project
is Supported by Many
Individual Donors





ಒಂದು ಪುಟ್ಟ ಊರು. ಆ ಪುಟ್ಟ ಊರಲ್ಲಿ ಒಂದು ಪುಟ್ಟ ಮನೆ. ಆ ಪುಟ್ಟ ಮನೆಯಲ್ಲಿ ಒಬ್ಬ ತುಂಟ ಹುಡುಗ ಇದ್ದ. ಅವನ ಹೆಸರೇ 'ಬುಡ್ರಮಜ್ಜಿ ಗುಂಡ.' ಆ ಹೆಸರು ಬರಲು ಒಂದು ಪುಟ್ಟ ಕಥೆಯೇ ಇದೆ. ಆದರೆ ಆ ಊರಲ್ಲಿ ಯಾರಿಗೂ ಇವನ ಮೂಲ ಹೆಸರು ಗೊತ್ತೇ ಇರಲಿಲ್ಲ.

ಸರಿ, ಕಥೆ ಏನಂದ್ರೆ, ಅವನ ಅಪ್ಪ ಒಂದು ಸಲ ಬುಲೆಟ್ ತಂದಿದ್ದ. ಬುಲೆಟ್ ಅಂದರೆ ರಾಯಲ್ ಎನ್ಫೀಲ್ಡ್ ಬೈಕ್. ಗುಂಡನಿಗೆ ಆ ಗಾಡಿಯು ಮತ್ತು ಅದು ಮಾಡುವ ಶಬ್ದವು ಬಹಳ ಅಂದ್ರೆ ಬಹಳ ಇಷ್ಟ ಆಯಿತು.




ಅವನು ಯಾವಾಗಲೂ ಬುಡ್ರ್... ಬುಡ್ರ್... ಬುಡ್ರ್... ಶಬ್ದ ಮಾಡುತ್ತಾ ಊರೆಲ್ಲಾ ಸುತ್ತಾಡುತ್ತಿದ್ದ. ಎಲ್ಲಿಗೇ ಹೋದರೂ ಆ ಬುಲೆಟ್ ನಂತೆ ಬುಡ್ರ್... ಬುಡ್ರ್... ಬುಡ್ರ್... ಶಬ್ದ ಮಾಡಿಕೊಂಡು ಓಡಾಡುತ್ತಿದ್ದ. ಆ ಊರಲ್ಲಿ ಬುಲೆಟ್‌ಗೆ 'ಬುಡ್ರಮಜ್ಜಿ' ಅಂತ ಕರೆಯುತ್ತಿದ್ದರು. ಆದ್ದರಿಂದ ಇವನನ್ನು ಎಲ್ಲರೂ 'ಬುಡ್ರಮಜ್ಜಿ ಗುಂಡ', 'ಬುಡ್ರಮಜ್ಜಿ ಗುಂಡ' ಅಂತ ಕರೆಯುತ್ತಿದ್ದರು.


ಒಂದು ಸಲ ಗುಂಡನ ಅಮ್ಮ,"ಏ ಗುಂಡ ಬಾರೋ ಇಲ್ಲಿ."
ಎಂದು ಕರೆದಳು.
ಗುಂಡ ಬುಡ್ರ್... ಬುಡ್ರ್... ಬುಡ್ರ್... ಅಂತ ಅಮ್ಮನ ಬಳಿ
ಬಂದು "ಏನಮ್ಮ?"ಎಂದು ಕೇಳಿದ.
"ಏನಿಲ್ಲಾ ಬೇಗ ಅಂಗಡಿಗೆ ಹೋಗಿ ಒಂದು ತೆಂಗಿನಕಾಯಿ
ತೆಗೆದುಕೊಂಡು ಬಾ. ಅಡಿಗೆ ಮಾಡಬೇಕು." ಅಂತ
ಇಪ್ಪತ್ತು ರೂಪಾಯಿ ಕೊಟ್ಟಳು.





ಆಯ್ತು ಆಯ್ತು ಅಂತ ಬುಡ್ರ್... ಬುಡ್ರ್... ಬುಡ್ರ್...
ಅಂದುಕೊಂಡೇ ಅಂಗಡಿಗೆ ಹೋದ.


ಒಂದು ತೆಂಗಿನಕಾಯಿ ತಗೊಂಡು ಬಂದು ಅಮ್ಮನಿಗೆ ಕೊಟ್ಟ.
ಆಗ, ಅವನ ಅಮ್ಮ “ಗುಂಡ ಗುಂಡ, ಅಪ್ಪ ಹೊರಗೆ ಇದಾರೆ,
ಬೇಗ ಅದನ್ನು ಸುಲಿಸಿಕೊಂಡು ಬಾ.” ಅಂತ ಹೇಳಿದಳು.

ಆಗ ಅಪ್ಪನ ಬಳಿ ಹೋಗಿ,“ಅಪ್ಪ ಅಪ್ಪ ತೆಂಗಿನಕಾಯಿ
ಸುಲಿಬೇಕಂತೆ.” ಎಂದು ಗುಂಡ ಹೇಳಿದ.
ಅದಕ್ಕೆ ಅಪ್ಪ, “ಮಂಚದ ಕೆಳಗೆ ಮಚ್ಚು ಇದೆ ತಗೊಂಡು
ಬಾ ಸುಲಿತಿನಿ.” ಅಂತ ಗುಂಡನಿಗೆ ಹೇಳಿದ.
ಆಗ ಗುಂಡ ಬುಡ್ರ್... ಬುಡ್ರ್... ಅಂತ ಹೋಗಿ,
ಸುಯ್ ಅಂತ ಮಂಚದ ಕೆಳಗೆ ತೂರಿ, ಮಚ್ಚು
ತಂದು ಅಪ್ಪನಿಗೆ ಕೊಟ್ಟ.
ಅಪ್ಪ ತೆಂಗಿನಕಾಯಿಯನ್ನು ಸುಲಿದು
ಮಗನಿಗೆ ಕೊಟ್ಟ.
“ಅಪ್ಪ ಅಪ್ಪ ಇದನ್ನೆಲ್ಲಾ ಸುಲಿದಿ, ಆದರೆ
ಈ ಜುಟ್ಟು ಯಾಕೆ ತೆಗೆದಿಲ್ಲಾ?” ಅಂತ
ಗುಂಡ ಕೇಳಿದ.
“ಅಯ್ಯೋ, ಅದನ್ನ ಸುಲಿಯೋ ಅವಶ್ಯಕತೆ ಇಲ್ಲ
ಕಣೋ... ಬೇಗ ಅಮ್ಮನಿಗೆ ಕೊಡು ಅಡಿಗೆ
ಮಾಡಲಿ.” ಅಂತ ಗದರಿದ.






ಆದರೆ, ಗುಂಡನಿಗೆ ಈ ಜುಟ್ಟು ಯಾಕೆ ತೆಗೆದಿಲ್ಲಾ? ಎಂಬ ಕುತೂಹಲ ಹೆಚ್ಚಾಯಿತು. ಒಳಗೆ ಏನಿದೆ ಅಂತ ನಿಧಾನಕ್ಕೆ ಅದರ ಜುಟ್ಟನ್ನೆಲ್ಲಾ ಕಿತ್ತು ಹಾಕಿದ. ಆಗ ಆಶ್ಚರ್ಯ! ತೆಂಗಿನಕಾಯಿಯಲ್ಲಿ ಮೂರು ತೂತುಗಳಿದ್ದವು. ಇವು ಏನಕ್ಕೆ ಇವೆ? ಅಂತ ಇನ್ನೂ ಕುತೂಹಲ ಉಂಟಾಯಿತು.


ಅಮ್ಮನ ಬಳಿ ಬಂದು,"ಅಮ್ಮ ಅಮ್ಮ ಈ ತೆಂಗಿನಕಾಯಿಗೆ ಯಾಕಮ್ಮ ಮೂರು ತೂತುಗಳು ಇವೆ?" ಅಂತ ಪ್ರಶ್ನಿಸಿದ.
ಆಗ ಅಮ್ಮ,"ಏ ನಿಮ್ಮ ಅಪ್ಪ ಈ ರೀತಿ ಸುಲಿದನಾ?" ಅಂತ ಕೇಳಿದಳು.
ಅದಕ್ಕೆ ಗುಂಡ,"ಇಲ್ಲಾ ಇಲ್ಲಾ ನಾನೇ ಈ ಜುಟ್ಟು ಒಳಗೆ ಏನಿದೆ ಅಂತ ಕುತೂಹಲದಿಂದ ಸುಲಿದೆ ಅಷ್ಟೇ."

"ಓ ಹೌದಾ... ಅದೇನಿಲ್ಲಾ ಕಣೋ, ಶಿವನಿಗೆ ಮೂರುಕಣ್ಣುಗಳು ಇರೋತರ ಈ ಕಾಯಿಗೂ ಮೂರು ತೂತುಗಳು ಇವೆ ಅಂತ ಒಬ್ಬರು ಅಂದರೆ, ಇನ್ನೂ ಕೆಲವರು ಬ್ರಹ್ಮ, ವಿಷ್ಣು, ಮಹೇಶ್ವರ ಅಂತ ಹೇಳುತ್ತಿರುತ್ತಾರೆ. ಅದೆಲ್ಲಾ ಆಮೇಲೆ ಹೇಳ್ತೇನೆ. ಬೇಗ ತೆಂಗಿನಕಾಯಿ ಕೊಡು ಅಡಿಗೆ ಮಾಡಬೇಕು." ಎಂದು ಅಮ್ಮ ಅಡುಗೆ ಮನೆ ಒಳಗೆ ಹೋದಳು.




ಗುಂಡ, ತೆಂಗಿನಕಾಯಿಯನ್ನು ಅಮ್ಮನಿಗೆ ಕೊಟ್ಟ. ಕುತೂಹಲದಿಂದ,“ತೆಂಗಿನಕಾಯಿ ಜುಟ್ಟು ಒಳಗೆ ಮೂರು ಕಣ್ಣು ಇರೋತರ, ನನ್ನ ತಲೆಕೂದಲೊಳಗೆ ಏನು ಇರಬಹುದು? ಇದೇ ರೀತಿ ನನ್ನ ತಲೆಯಲ್ಲಿಯೂ ಮೂರು ಕಣ್ಣುಗಳಿರಬಹುದಾ?”ಆಲೋಚನೆ ಮಾಡಿತ್ತಾ, ಯಾರಿಗೂ ಗೊತ್ತಾಗದ ಹಾಗೆ ಕ್ಷೌರದ ಅಂಗಡಿಗೆ ಹೋದ. “ಅಣ್ಣ ಅಣ್ಣ ಅಪ್ಪ ಹೇಳಿದರು ನನ್ನ ತಲೆ ಗುಂಡು ಮಾಡಬೇಕಂತೆ.” ಅಂತ ಸುಳ್ಳು ಹೇಳಿದ.

ಆಗ ಕ್ಷೌರಿಕ,“ಅವರ ಅಪ್ಪ ಹೇಳಿದ್ದರೂ ಹೇಳಿರಬಹುದು.” ಅಂತ ಗುಂಡನಿಗೆ ಗುಂಡು ಮಾಡಿ ಕಳಿಸಿದ.


ಆಗ ಗುಂಡ ಓಡೋಡಿ ಬಂದು,“ಅಮ್ಮ ಅಮ್ಮ ನೋಡಿಲ್ಲಿ ನನ್ನ ತಲೆ.” ಅಂತ ತೋರಿಸಿದ.
“ಅಯ್ಯೋ ಗುಂಡ ಏನೋ ನಿನ್ನ ಅವತಾರ. ಯಾರೋ ನಿನಗೆ ಗುಂಡು ಹೊಡೆಸಿದ್ದು?” ಅಂತ ಕೇಳಿದಳು.
ಆಗ ಗುಂಡ,“ಯಾರಿಲ್ಲಮ್ಮ ನಾನೇ ಹೊಡೆಸಿಕೊಂಡೆ. ತೆಂಗಿನಕಾಯಿಯ ಜುಟ್ಟು ಒಳಗೆ ಮೂರು ಕಣ್ಣು ಇರುವ ಹಾಗೆ ನನ್ನ ತಲೆಯಲ್ಲಿಯೂ ಇರಬಹುದು ಅಂತ ಹೀಗೆ ಮಾಡಿದೆ.” ಎಂದ.
ಅಷ್ಟರಲ್ಲಿ ಅವನ ಅಪ್ಪನಿಗೂ ಗೊತ್ತಾಯ್ತು ಈ ವಿಷಯ. ಅಪ್ಪನೂ ಚೆನ್ನಾಗಿ ಬೈದು ಹೊರಗೆ ಹೋದ.
“ಅಲ್ಲೋ ಗುಂಡ ನಾಳೆ ಬೇರೆ ನಿನ್ನ ಹುಟ್ಟಿದ ಹಬ್ಬ ಇದೆ. ಹೇಗೋ ಮಾಡೋದು? ಬಂದವರೆದರು ಏನು ಹೇಳ್ತಿಯೋ?” ಅಂತ ಗುಂಡನ ಅಮ್ಮ ಕೇಳಿದಳು.

ಮರುದಿನ ರಾತ್ರಿ ಅಕ್ಕಪಕ್ಕದ ಮನೆಯವರೆಲ್ಲರೂ ಗುಂಡನ ಹುಟ್ಟಿದ ಹಬ್ಬಕ್ಕೆ ಮನೆಯಲ್ಲಿ ಸೇರಿದ್ದರು.
ಗುಂಡನನ್ನು ನೋಡಿ ಎಲ್ಲರೂ ಪ್ರಶ್ನೆ ಕೇಳಿದ್ದೇ ಕೇಳಿದ್ದು.
“ಯಾರೋ ಗುಂಡ ನಿನಗೆ ಗುಂಡು ಮಾಡಿದ್ದು?” ಅಂತ.
ಆಗ ಅವನ ಮುಖದಲ್ಲಿ ಮುಗುಳ್ನಗು.
ಅವನ ಅಮ್ಮ ನಡೆದುದೆಲ್ಲಾ ವಿವರಿಸಿದಳು.
ಎಲ್ಲರೂ ಗೊಳ್ ಎಂದು ನಕ್ಕರು ಹಾಗೂ
ಶಿರಾ ಉಪ್ಪಿಟ್ಟು ತಿಂದು ಸಂತಸ ವ್ಯಕ್ತಪಡಿಸಿದರು. *



‘ಧ್ವನಿ’ ಶೈಕ್ಷಣಿಕ ಯೋಜನೆಗಳ ವ್ಯಾಪ್ತಿಯಲ್ಲಿ ಉಚಿತ ಹಂಚಿಕೆಗಾಗಿ

ಬುಡ್ರಮಜ್ಜಿ ಗುಂಡ ಕಥೆಯ ವಿಡಿಯೋವನ್ನು ನೋಡಲು ಈ QR ಕೋಡ್ ಬಳಸಿ.


**ಸಂಪರ್ಕ ಮಾಹಿತಿ**

ಧ್ವನಿ ಶೈಕ್ಷಣಿಕ ಸಂಪನ್ಮೂಲ ಕೇಂದ್ರ

# ೭೬,‘ಪುಷ್ಪಾಂಜಲಿ’

೩ನೇ ಅಡ್ಡರಸ್ತೆ ಶಿವಗಿರಿ,

ಧಾರವಾಡ–೫೮೦೦೦೭,

ಮೊ. ೯೯೮ ೬೬೬ ೧೦೫೫

dhwanitrust@gmail.com,

www.dhwanitrust.org



ಗಮನಿಸಿ : ಈ ಶೈಕ್ಷಣಿಕ ಸಂಪನ್ಮೂಲವನ್ನು ಕೇವಲ ಶೈಕ್ಷಣಿಕ ಉದ್ದೇಶಕ್ಕಾಗಿ ರೂಪಿಸಲಾಗಿದೆ. ಇದನ್ನು ಧ್ವನಿ ಶೈಕ್ಷಣಿಕ ಸಂಪನ್ಮೂಲ ಕೇಂದ್ರದ ಪೂರ್ವಾನುಮತಿಯಿಲ್ಲದೇ ವಾಣಿಜ್ಯ ಉದ್ದೇಶಗಳಿಗಾಗಿ ಪುನರ್ಮುದ್ರಿಸುವುದಾಗಲೀ, ಬಳಸಿಕೊಳ್ಳುವುದಾಗಲೀ ನಿಷಿದ್ಧ. ಶೈಕ್ಷಣಿಕ ಉದ್ದೇಶದಿಂದ ಶಿಕ್ಷಕರು, ಪಾಲಕರು, ಸಂಪನ್ಮೂಲ ವ್ಯಕ್ತಿಗಳು ಇದನ್ನು ಉಪಯೋಗಿಸುವುದಾದರೆ ಧ್ವನಿ ಶೈ.ಸಂ.ಕೇಂದ್ರದ ಗಮನಕ್ಕೆ ತರವುದು ಅಪೇಕ್ಷಣೀಯ.